# ಶಿವ ಹೀಗಿದ್ದಾನೆ ಇಲ್ಲಿದ್ದಾನೆ



ದೈವವನ್ನು ಪ್ರತ್ಯಕ್ಷ ಕಂಡವರ ಭಾವನೆಗಳ ಅಭಿವ್ಯಕ್ತಿ 'ರುದ್ರಸೂಕ್ತ'. 'ಇಲ್ಲಿದ್ದಾನೆ ದೇವರು, ಹೀಗಿದ್ದಾನೆ ದೇವರು' ಎನ್ನುವ ಸ್ಪಷ್ಟ ತಿಳಿವಿನ ರುದ್ರಸೂಕ್ತ, ಚರ–ಚರ ಎಲ್ಲದರಲ್ಲಿಯೂ ಶಿವನನ್ನು ಕಾಣುವ ಕಾಣಿಸುವ ಪ್ರಯತ್ನ. ಸತ್ಯ–ಸೌಂದರ್ಯದ ಪ್ರತಿರೂಪವಾದ 'ಶಿವಗೀತ'ದ ಮಹತ್ವವನ್ನು ಪರಿಚಯಿಸುವ ಈ ಬರಹ – 'ಶಿವರಾತ್ರಿ' ವಿಶೇಷ.

■ ಡಿ.ಎಂ. ಘನಶ್ಯಾಮ

ಬಿಲ್ಲುಬಾಣ ಹಿಡಿದ ಕಿರಾತೇಶ್ವರ... ಸಿಕ್ಕಿಂ ರಾಜ್ಯದಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳ ಸಿದ್ದೇಶ್ವರ ಧಾಮ್. ದೇಶದ ವಿವಿಧೆಡೆಯಿರುವ ದ್ವಾದಶ ಜ್ಯೋತಿರ್ಲಿಂಗಗಳ ಪ್ರತಿಕೃತಿಗಳು ಇಲ್ಲಿವೆ. ಸೊಲೊಫೊಕ್ ಗಿರಿಯ ಮೇಲೆ 33 ಅಡಿ ಎತ್ತರದ ಶಿವನ ಬೃಹತ್ ಪ್ರತಿಮೆಯಿದೆ.